ಅ.ದಾ. ಸಂಃ 15/2020 ಪಿ.ಡಬ್ಲ್ಯು: 01

ದಿನಾಂಕಃ 16-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ **1** ನೇ ಪ್ರತಿವಾದಿಯ ಪರ ಶ್ರೀ.ಎನ್.ಎಂ. ವಕೀಲರಿಂದಃ</u>

ನಾನು 3 ತಿಂಗಳಿಗೊಮ್ಮೆ ಊರಿಗೆ ಬರುತ್ತೇನೆ. ಸದರಿ ಸಮಯದಲ್ಲಿ ದಾವಾ ಆಸ್ತಿಯ ಬಳಿ ಹೋಗುತ್ತಿರಲಿಲ್ಲ. ದಾವಾ ಆಸ್ತಿ ಇರುವ ಗ್ರಾಮ ಬೇರೆ ಮತ್ತು ನಾವು ವಾಸ ಇರುವ ಗ್ರಾಮ ಬೇರೆ. ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ನನಗೆ 2019 ರಲ್ಲಿ ತಿಳಿಯಿತು. ದಾವಾ ಆಸ್ತಿಯನ್ನು ಮಾರಾಟ ಮಾಡುವ ವಿಚಾವನ್ನು ನನ್ನ ತಂದೆ ಮತ್ತು ತಾಯಿ ನನಗೆ ಹೇಳಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತನ್ನ ತಂದೆ ಮತ್ತು ತಾಯಿ ಮಾರಾಟ ಹಣವನ್ನು ಖರ್ಚು ಮಾಡುತ್ತಿದ್ದಾಗ ತನಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಸದರಿ ಹಣವನ್ನು ನನಗೂ ಸಹ ನನ್ನ ತಂದೆ ತಾಯಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಹಣವನ್ನು ಮಧ್ಯಪಾನ ಮಾಡಲು ಮತ್ತು ಮಾಂಸಾಹಾರ ತಿನ್ನಲು ಉಪಯೋಗಿಸುತ್ತಿದ್ದಾಗ ತಿಳಿಯಿತು. ದಾವಾ ಆಸ್ತಿಯ ಮಾರಾಟದ ಹಣದಿಂದ ಯಾವುದೇ ಆಸ್ತಿಯನ್ನು ಖರೀದಿ ಮಾಡಿಲ್ಲ. ಖರೀದಿಯ ಹಣ ಎಷ್ಟು ಎಂದು ಗೊತ್ತಿಲ್ಲ. ಮಾರಾಟದ ಹಣದಿಂದ ನನ್ನ ತಂದೆ ತಾಯಿ ನನಗೆ ವಿದ್ಯಾಭ್ಯಾಸ ಕೊಡಿಸಿ ಸಾಲಗಳನ್ನು ತೀರಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯಾವುದೇ ಸಾಲ ಇಲ್ಲ ಎಂದು ನುಡಿಯುತ್ತಾರೆ. ನನಗೆ ತಮ್ಮ ಇದ್ದಾನೆ. ನನ್ನ ತಮ್ಮ ವ್ಯವಸಾಯ ಮಾಡುತ್ತಿದ್ದಾನೆ. ಮಾರಾಟ ಮಾಡುವ ಕಾಲಕ್ಕೆ ವಿದ್ಯಾಭ್ಯಾಸ ಮಾಡುತ್ತಿದ್ದ. ದಾವಾ ಆಸ್ತಿಯು ನಮ್ಮ ಕುಟುಂಬದ ಆಸ್ತಿ ಎಂದರೆ ಸರಿ. ನನ್ನ ತಾತನಿಗೆ ಒಟ್ಟು 4 ಜನ ಮಕ್ಕಳು. ಸದರಿ ನನ್ನ ತಾತನ ಮಕ್ಕಳಿಗೂ ಸಹ ದಾವಾ ಆಸ್ತಿಯಲ್ಲಿ ಪಾಲು ಇದೆ ಎಂದರೆ ಸರಿ. ಸದರಿ ನನ್ನ ಮಕ್ಕಳೂ ಸಹ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಮಾರಾಟದ ವಿಚಾರ ನನ್ನ ತಂದೆ ತಾಯಿ ಮತ್ತು ತಾಯಿ ನನಗೆ ಮೊದಲೇ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕಾರಣ ಸಹಿ ಮಾಡಲು ಕರೆಸಲಿಲ್ಲ ಎಂದರೆ ಸರಿಯಲ್ಲ.

ಅ.ದಾ. ಸಂಃ 15/2020 ಪಿ.ಡಬ್ಲ್ಯು: 01

ನನ್ನ ತಮ್ಮ ಸಹ ಈ ದಾವೆಯ ಪಕ್ಷಗಾರ. ದಾವಾ ಆಸ್ತಿಯನ್ನು ಈಗಾಗಲೇ ಮಾರಾಟ ಮಾಡಿರುವುದರಿಂದ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರೀಕ್ಷೆಯ ನೆಪ ಮಾಡಿ ಕ್ರಯ ಪತ್ರ ನೊಂದಣಿ ಕಾಲಕ್ಕೆ ನಾನು ಬಂದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು